ಬೊಕ್ಕಸಕ್ಕೆ ಆಗುತ್ತಿರುವಂತಹ ಹೊರೆಯನ್ನು ಕಡಿಮೆ ಮಾಡಬೇಕೆಂದು ನಾನು ಲೋಕೋಪಯೋಗಿ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಿಳಿಸಿರುವಂತಹ ಈ ಯೋಜನೆ ಈಗಾಗಲೇ ಕಳೆದ 29 ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ನಮ್ಮ ಸರ್ಕಾರ ಬರುವ ಆರ್ಥಿಕ ವರ್ಷದಲ್ಲಿ ಈ ಕೆಲಸಕ್ಕೆ ಆದ್ಯತೆ ಕೊಟ್ಟು ತೆಗೆದುಕೊಳ್ಳುತ್ತೇವೆ ಎನ್ನುವಂತಹ ಭರವಸೆಯನ್ನು ಕೊಡುತ್ತೇನೆ.

(ಎ) ವಿಷಯ: <u>ವೀರರಾಣಿ ಚಿನ್ನಮ್ಮಾಜಿಯ ಕಿತ್ತೂರನ್ನು ಪೂರ್ಣಪ್ರಮಾಣದ ತಾಲ್ಲೂಕನ್ನಾಗಿ ಘೋಷಿಸುವ ಬಗ್ಗೆ</u> :

ಶ್ರೀ ಸುರೇಶ್ ಮಾರಿಹಾಳ್ :- ಮಾನ್ಯ ಅಧ್ಯಕ್ಷರೇ, ನಾನು ವೀರರಾಣಿ ಚೆನ್ನಮಾಜಿಯ ಕಿತ್ತೂರನ್ನು ಪೂರ್ಣ ಪ್ರಮಾಣದ ತಾಲ್ಲೂಕನ್ನಾಗಿ ಘೋಷಿಸುವ ಬಗ್ಗೆ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಕರುಣಾಕರ ರೆಡ್ಡಿ:- ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆ ಕುರಿತು ವಿವರವಾಗಿ ಅಧ್ಯಯನ ಮಾಡಿ ವರದಿ ಸಲ್ಲಿಸುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ ಕಂಇ 28 ಭೂದಾಮು 2007 ದಿನಾಂಕ 29-08-2007 ಹಾಗೂ ದಿನಾಂಕ 5-10-2007 ರಲ್ಲಿ ಸರ್ಕಾರವು ತಾಲ್ಲೂಕು ಪುನರ್ ರಚನಾ ಸಮತಿಯನ್ನು ರಚಿಸಿದೆ. ಈ ಸಮಿತಿಯಲ್ಲಿ ಪ್ರಸ್ತುತ ಈ ಕೆಳಕಂಡ ಅಧ್ಯಕ್ಷರು ಹಾಗೂ ಸದಸ್ಯರುಗಳಿದ್ದಾರೆ.

1. ಶ್ರೀ ಎಂ.ಬಿ. ಪ್ರಕಾಶ್, ಭಾ.ಆ. ಸೇ. (ನಿ) ಅಧ್ಯಕ್ಷರು
2. ಶ್ರೀ ಚಿರಂಜೀವಿಸಿಂಗ್, ಭಾ.ಆ.ಸೇ. (ನಿ) ಸದಸ್ಯರು
3. ಶ್ರೀ ಹೆಚ್. ಶಿವಾನಂದ, ಭಾ.ಆ.ಸೇ. (ನಿ) ಸದಸ್ಯರು
4. ಶ್ರೀ ಜಿ.ಎಸ್. ನಾರಾಯಣ ಸ್ವಾಮಿ ಭಾ.ಆ.ಸೇ. (ನಿ) ಸದಸ್ಯ ಕಾರ್ಯದರ್ಶಿ
   ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ

ಈ ಸಮಿತಿಯು ಇದುವರೆಗೆ 24 ಜಿಲ್ಲೆಗಳಿಗೆ ಭೇಟಿ ನೀಡಿ ಅಲ್ಲಿನ ಜಿಲ್ಲಾ/ ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ತಾಲ್ಲೂಕುಗಳ ಪುನರ್ ರಚನೆ ಕುರಿತು ವಿಚಾರ ವಿನಿಮಯ ಮಾಡಿಕೊಂಡಿರುತ್ತದೆ. ಅಲ್ಲದೆ ಅಲ್ಲಿನ ಸಾರ್ವಜನಿಕರು ಮತ್ತು ಚುನಾಯಿತ ಪ್ರತಿನಿಧಿಗಳು ನೀಡಿದ ಮನವಿಗಳನ್ನು ಸ್ವೀಕರಿಸಿರುತ್ತದೆ. ಇಲ್ಲಿಯ ವರೆವಿಗೆ ಚುನಾಯಿತ ಪ್ರತಿನಿಧಿಗಳು, ಸಂಘ ಸಂಸ್ಥೆಗಳು ಮತ್ತು ಸಾರ್ವಜನಿಕರಿಂದ ಒಟ್ಟು 1360 ಮನವಿಗಳು ಬಂದಿದ್ದು ಅವು ಸಮಿತಿಯ ಪರಿಶೀಲನೆಯಲ್ಲಿ ಇವೆ. ಇದರ ಜೊತೆಗೆ ಸಮಿತಿಯು ಕೆಲವು ಪ್ರಮುಖ ಇಲಾಖೆಗಳು ಅಂದರೆ, ಕಂದಾಯ, ನಗರಾಭಿವೃದ್ಧಿ, ಆರ್ಥಿಕ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ , ಇ-ಆಡಳಿತ, ಸಮಾಜ ಕಲ್ಯಾಣ ಮುಂತಾದ ಇಲಾಖೆಗಳ ಪ್ರಧಾನ ಕಾರ್ಯದರ್ಶಿ/ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಅವರುಗಳ ಅಭಿಪ್ರಾಯ, ಸಲಹೆಗಳನ್ನು ಪಡೆದಿರುತ್ತದೆ.

ಕಿತ್ತೂರನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಬಗ್ಗೆ ಮನವಿ / ಬೇಡಿಕೆ ಸ್ವೀಕೃತವಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 28 ಭೂದಾಪು 2007 ದಿನಾಂಕ 13-01-2009 ರಲ್ಲಿ ತಾಲ್ಲೂಕು ಪುನರ್ ರಚನಾ ಸಮಿತಿಯ ಕಾಲಾವಧಿಯನ್ನು ದಿನಾಂಕ 01-02-2009 ರಿಂದ ಮೇ 2009 ರ ಅಂತ್ಯದವರೆಗೆ ವಿಸ್ತರಿಸಿ ಆದೇಶಿಸಲಾಗಿದೆ. ಸಮಿತಯು ತನ್ನ ವರದಿ/ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಸದರಿ ವರದಿಯನ್ನು ಪರಿಶೀಲಿಸಿ ಸರ್ಕಾರವು ನಿಮಯಾವಳಿಗಳನ್ವಯ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಸುರೇಶ್ ಮಾರಿಹಾಳ್ :- ಮಾನ್ಯ ಅಧ್ಯಕ್ಷರೇ, ಕಂದಾಯ ಸಚಿವರು ಹೇಳಿದ್ದು ನಿಜ. ಆದರೆ ನಾನು ವಿಶೇಷವಾಗಿ ಬೆಳಗಾಂ ಜಿಲ್ಲೆಯಲ್ಲಿ ನಡೆಯತಕ್ಕಂಥ ಈ ಒಂದು ಅಧಿವೇಶನದಲ್ಲಿ ನಮ್ಮ ಬೆಳಗಾಂ ಜಿಲ್ಲೆಗೆ ಹೆಸರು ತರಬೇಕಾದರೆ ವೀರರಾಣಿ ಚೆನ್ನಮ್ಮನ ಹೆಸರು ಪ್ರಮುಖವಾಗಿದೆ. ಆದ್ದರಿಂದ ವಿಶೇಷವಾಗಿ ಈ ಅಧಿವೇಶನದೊಳಗೆ ತಾವು ಕಿತ್ತೂರನ್ನು ಪೂರ್ಣ ಪ್ರಮಾಣದ ತಾಲ್ಲೂಕನ್ನಾಗಿ ಮಾಡುತ್ತೀರಿ ಎನ್ನುವ ಭರವಸೆ ನಮ್ಮ ಕಿತ್ತೂರು ನಾಡಿನ ಜನತೆಯದಾಗಿತ್ತು. ಹಿಂದಿನ ಅಧಿವೇಶನದಲ್ಲೂ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆನು. ಆಗ ಕ್ಷೇತ್ರ ಪುನರ್ ವಿಂಗಡನೆ ಮಾಡುವ ಕಾರ್ಯವಿರುವುದರಿಂದ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದರು.

ಈ ಕಾರ್ಯ ಮುಗಿದಿದೆ. ಅದುರಿಂದ ಬರುವ ಜನವರಿ 26ನೇ ತಾರೀಖಿಗೆ ವಿಶೇಷವಾಗಿ ಕಿತ್ತೂರು ತಾಲ್ಲೂಕನ್ನು ಮಾಡಬೇಕೆಂದು, ನಾನು ನಮ್ಮ ಕಿತ್ತೂರು ನಾಡಿನ ಜನತೆಯ ಪರವಾಗಿ ಸರ್ಕಾರಕ್ಕೆ ಕಳಕಳಿಯ ವಿನಂತಿಯನ್ನು ಮಾಡುತ್ತೇನೆ, ಮತ್ತೆ ಸರ್ಕಾರಕ್ಕೆ ಒಂದು ಜಿಲ್ಲೆಯಾಗಲಿ, ತಾಲ್ಲೂಕಾಗಲಿ, ಮಾಡಬೇಕಾದರೆ ಅಸಾಧ್ಯವೇನು ಇಲ್ಲ. ಇಲ್ಲಿ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದಂಥ ಬ್ರಿಟೀಷರ ವಿರುದ್ಧವಾಗಿ ಪ್ರಪ್ರಥಮವಾಗಿ ಹೋರಾಡಿ ಮಡಿದಂಥ ಮಹಿಳೆಯ ಕೀರ್ತಿಯನ್ನು ಬೆಳಗುವ ಸಲುವಾಗಿ ಕಿತ್ತೂರಿಗೆ ಒಂದು ಸ್ಥಾನಮಾನಗಳು ಸಿಗುವ ಸಲುವಾಗಿ, ನಾನು ಈ ಒಂದು ವಿಶೇಷ ಅಧಿವೇಶನದ ಮುಖಾಂತರ ನಮ್ಮ ಕಿತ್ತೂರು ಪೂರ್ಣ ಪ್ರಮಾಣದ ತಾಲ್ಲೂಕೆಂದು ಘೋಷಣೆ ಯಾಗಬೇಕೆಂಬ ಮನವಿಯನ್ನು ಮಾಡುತ್ತೇನೆ. ಈ ಸದನದ ಎಲ್ಲಾ ಸದಸ್ಯರ ಸಹಕಾರದಿಂದಲೂ ಕೂಡ ನಾನು ಕೇಳುತ್ತಿದ್ದೇನೆಂಬ ಮಾತನ್ನು ಹೇಳತ್ತೇನೆ. ಸರ್ಕಾರಗಳು ಬಂದು 60ವರ್ಷಗಳಾದರೂ ಕೂಡ ಯಾವುದೇ ಸರ್ಕಾರಗಳು ಕಿತ್ತೂರಿಗೆ ಪ್ರಾಧಿಕಾರವನ್ನು ರಚನೆ ಮಾಡಲಿಲ್ಲ. ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಗಳಾಗಿ, ಉಪ ಮುಖ್ಯಮಂತ್ರಿಗಳಾದ ಮೇಲೆ, ಕಿತ್ತೂರು ಪ್ರಾಧಿಕಾರವನ್ನು ರಚನೆ ಮಾಡಿದರು. ಇಲ್ಲಿಗೆ ಡಿಗ್ರಿ ಕಾಲೇಜನ್ನು ಕೊಟ್ಟರು, ITI ಕಾಲೇಜನ್ನು ಕೊಟ್ಟರು, ಅಲ್ಲಿ PUC ಕಾಲೇಜು ಕೂಡ ಇರಲಿಲ್ಲ. ಇಲ್ಲಿ ನಾನು ಶಾಸಕನಾದ ಮೇಲೆ ಹೀಗೆ ಹಲವಾರು ಕೆಲಸ ಕಾರ್ಯಗಳು ಆಗುವಂಥ ವ್ಯವಸ್ಥೆಯಾಗಿದೆ. ಅದುದರಿಂದ ಸರ್ಕಾರ ಗಹನೀಯವಾಗಿ ವಿಚಾರ ಮಾಡಿ ತಾಲ್ಲೂಕೆಂದ ಘೋಷಣೆ ಮಾಡಬೇಕೆಂಬುದು ನನ್ನ ಕಳಕಳಿಯ ಮನವಿಯಾಗಿದೆ. ನಾನು ಮಾನ್ಯ ಸಭಾಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಜಿ.ಕರುಣಾಕರ ರೆಡ್ಡಿ :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿದ ರೀತಿಯಲ್ಲಿ ಸುಮಾರು 1,360 ಮನವಿಗಳು ಬಂದಿವೆ. ಇದರ ಅವಧಿಯನ್ನು ಹೆಚ್ಚಿಸಬೇಕೆಂದು ಸಮಿತಿ ಕೇಳಿಕೊಂಡಿರುವ ರೀತಿಯಲ್ಲಿ, ಅದರ ಅವಧಿಯನ್ನು ವಿಸ್ತರಣೆ ಮಾಡಿದ್ದೇವೆ. ಅವರು ವರದಿಯನ್ನು ಕೊಟ್ಟ ನಂತರ ಮಾನ್ಯ ಸದಸ್ಯರ ಕಳಕಳಿ ಏನು ಇದೆ. ಬ್ರಿಟೀಷರ ವಿರುದ್ಧ ಹೊರಾಡಿದ ವೀರ ರಾಣಿ ಕಿತ್ತೂರು ಚೆನ್ನಮ್ಮನವರ ಬಗ್ಗೆ ಈ ನಾಡಿನ ಎಲ್ಲಾ ಜನರಿಗೆ ಗೌರವವಿದೆ. ಅವರಿಗೆ ಖಂಡಿತವಾಗಿಯೂ ಒಳ್ಳೆಯ ಸಿಹಿ ಸುದ್ದಿ ಸಿಗಬೇಕಾದರೆ ಮೇ ತಿಂಗಳವರೆಗೆ ಕಾಯಬೇಕೆಂದು, ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಮನವಿಯನ್ನು ಮಾಡುತ್ತೇನೆ.

ಶ್ರೀ ಸುರೇಶ್ ಎಸ್ ಮಾರಿಹಾಳ್ :- ಮಾನ್ಯ ಅಧ್ಯಕ್ಷರೆ, ನಮ್ಮ ಘನ ಸರ್ಕಾರ ಗುಲ್ಬರ್ಗದಲ್ಲಿ cabinet meeting ಅನ್ನು ಮಾಡಿ, ಅಲ್ಲಿ ಯಾದಗಿರಿ ಜಿಲ್ಲೆಯನ್ನು ಘೋಷಣೆ ಮಾಡಿದೆ. ಇಲ್ಲಿ ವಿಶೇಷವಾಗಿ ಅಧಿವೇಶನವನ್ನು ಮಾಡುತ್ತಿರುವುದರಿಂದ ಇಲ್ಲಿ ತಾಲ್ಲೂಕು ಎಂದು ಘೋಷಣೆ ಮಾಡಬೇಕೆಂಬುದು ಒತ್ತಾಯವಾಗಿದೆ. ಕಿತ್ತೂರು ನಾಡಿನ ಜನತೆಯ ಪರವಾಗಿ ಸರ್ಕಾರದಲ್ಲಿ ಹಾಗೂ ಮಾನ್ಯ ಮುಖ್ಯಮಂತ್ರಿಯವರಲ್ಲಿ ತಾಲ್ಲೂಕೆಂದು ಘೋಷಣೆ ಮಾಡಬೇಕೆಂದು ನನ್ನ ಕಳಕಳಿಯ ಮನವಿ ಇದೆ.

ಅಧ್ಯಕ್ಷರು :- ಮಾನ್ಯ ಸಚಿವರೆ, ಅವರು ಆದ್ಯತೆಯ ಮೇಲೆ ಮಾಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಸುರೇಶ್ ಎಸ್. ಮಾರಿಹಾಳ್ :- ಮಾನ್ಯ ಅಧ್ಯಕ್ಷರೆ, ಇಲ್ಲಿ ವಿಶೇಷವಾಗಿ ಅಧಿವೇಶನ ನಡೆದಿದೆ. ತಾವು ಕೂಡ ಉತ್ತರ ಕರ್ನಾಟಕದಲ್ಲಿ ಜನಿಸಿದಂಥವರು. ತಮಗೂ ಕೂಡ ಈ ಒಂದು ವಿಷಯಕ್ಕೆ ಬೆಳಕನ್ನು ಚೆಲ್ಲಬೇಕೆಂಬುದು ನನ್ನ ಮನವಿಯಾಗಿದೆ. ಆಗ ಈ ಅಧಿವೇಶನಕ್ಕೂ ಮಹತ್ವ ಬರುತ್ತದೆ.

ಶ್ರೀ ಜಿ.ಕರುಣಾಕರ ರೆಡ್ಡಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರ ಕಳಕಳಿ ಅರ್ಥವಾಗಿದೆ. ನೀವು ಹೇಳಿದಹಾಗೆ ಅವರು ಮೇ ತಿಂಗಳಲ್ಲಿ ಏನು ವರದಿಯನ್ನು ಕೊಡುತ್ತಾರೋ, ಆ ನಂತರ ಸರ್ಕಾರ ಎಲ್ಲಾ ರೀತಿಯು ಯೋಚನೆಯನ್ನು ಮಾಡಿ, ಒಂದು ಒಳ್ಳೆಯು ನಿರ್ಧಾರವನ್ನು ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : ಮಾನ್ಯ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡರವರೆ, ತಾವು ಕೇಳಿ.

(ಏ) ವಿಷಯ: <u>ಕೆರೆಗಳ ಹೂಳನ್ನು ತೆಗೆಸಿ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ</u> :

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ (ಕುಂದಗೋಳ) :- ಮಾನ್ಯ ಅಧ್ಯಕ್ಷರೆ, ಕುಂದಗೋಳ ಕ್ಷೇತ್ರದ ಸುಮಾರು 53ಕ್ಕೂ ಹೆಚ್ಚಿನ ಹಳ್ಳಿಗಳಿರುವ ಜನರು ಕರೆಗಳ ನೀರನ್ನು ಕುಡಿಯಲು ಉಪಯೋಗಿಸುತ್ತಿದ್ದು, ಈ ಕೆರೆಗಳ ತುಂಬ ಹೂಳು ತುಂಬಿ ನೀರು ಮಲಿನಗೊಂಡಿರುವುದರಿಂದ ಕುಡಿಯಲು ಯೋಗ್ಯವಲ್ಲದಂತಾಗಿರುತ್ತದೆ. ಅದುದರಿಂದ ಈ ಕೆರೆಗಳ ಹೂಳನ್ನು ತೆಗೆಸಿ ಶುದ್ಧ ಕುಡಿಯುವ ನೀರನ್ನು ಸರಬರಾಜು